

**ಕೃಷ್ಣಮೂರ್ತಿ ಹನೂರು**
ಕಲೆ: ನಂಜುಂಡಸ್ವಾಮಿ

# ಎಸ್.ಎಲ್. ಭೈರಪ್ಪ
# ಹನಿ ಹನಿ ನೆನಪುಗಳು

1978ರ ಸುಮಾರು ಇರಬಹುದು. ಚಿತ್ರದುರ್ಗದಲ್ಲಿ ರಾಧಾಕೃಷ್ಣ ಎಂಬ ವಿದ್ಯುಚ್ಛಕ್ತಿ ನಿಗಮದ ಸೂಪರಿಂಟೆಂಡೆಂಟ್ ಎಂಜಿನಿಯರ್ ಇದ್ದರು. ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು ಕನ್ನಡ ಮೇಷ್ಟ್ರಾಗಿದ್ದ ನನ್ನನ್ನು ಕುರಿತು, 'ನಿಮಗೆ ಎಸ್.ಎಲ್. ಭೈರಪ್ಪನವರು ಗೊತ್ತೆ?' ಎಂದರು. 'ಇಲ್ಲ' ಎಂದೆ. ಆಗ ನಾನು ಅವರ ಒಂದೆರಡು ಕಾದಂಬರಿಗಳನ್ನು ಓದಿದ್ದೆನಷ್ಟೆ. ಆದರೆ ರಾಧಾಕೃಷ್ಣ ಮತ್ತು ಅವರ ಪತ್ನಿ ಭೈರಪ್ಪನವರ ಪ್ರಕಟವಾದ ಎಲ್ಲ ಕಾದಂಬರಿಗಳನ್ನೂ ಮತ್ತೆ ಮತ್ತೆ ಓದುವವರಾಗಿದ್ದು, 'ಅವರನ್ನು ಹೇಗಾದರೂ ಚಿತ್ರದುರ್ಗಕ್ಕೆ ಬರುವಂತೆ ಮಾಡಬೇಕಲ್ಲ' ಎಂದರು. 'ಅವರ ಅಭಿಮಾನಿಗಳಾಗಿರುವ ನಿಮ್ಮಿಂದಲೇ ಅದು ಸಾಧ್ಯ' ಎಂದೆ. ರಾಧಾಕೃಷ್ಣ ತಮ್ಮ ಅಭಿಮಾನ ಮತ್ತು ಪುಸ್ತಕ ಓದಿನ ಹಿನ್ನಲೆಯಲ್ಲಿ ಭೈರಪ್ಪನವರಿಗೆ ದೂರವಾಣಿ ಮಾಡಿ ಅವರ ಕಾದಂಬರಿಯ ಇಷ್ಟವಾದ ಭಾಗಗಳು, ಅದರಲ್ಲಿ ಅತಿ ಮೆಚ್ಚುಗೆಯ ಘಟನೆ, ಸಂಭಾಷಣೆಗಳು ಯಾವುವು ಎಂದೆಲ್ಲ ಕರಾರುವಾಕ್ಕಾಗಿ ಮಾತಾಡಿ ಹಾಗೆಯೇ ದುರ್ಗಕ್ಕೆ ಬರುವುದರ ಪ್ರಸ್ತಾಪವನ್ನು ಮಾಡಿರಬೇಕು.

ಆಮೇಲಾಮೇಲೆ ನಾನು ಕಂಡಂತೆ, ಭೈರಪ್ಪನವರ ಎದುರು ಅಭಿಮಾನಿಗಳೆಂದುಕೊಂಡು ನಿಂತವರು ಅವರ ಕೃತಿಗಳನ್ನು ಓದದೇ ಖ್ಯಾತಿಯನ್ನಷ್ಟೇ ತಿಳಿದು, 'ಸಾರ್ ತಮ್ಮ ಬಗ್ಗೆ ಕೇಳಿದ್ದೇನೆ, ತಾವು ಅದ್ಭುತ ಲೇಖಕರು, ಕನ್ನಡದ ಹೆಮ್ಮೆ' ಎಂದೆಲ್ಲ ಮಾತಾಡುವಲ್ಲಿ ಭೈರಪ್ಪನವರ ಮುಖದಲ್ಲಿ ಯಾವ ಪ್ರತಿಕ್ರಿಯೆಯೂ ಇಲ್ಲದಿರಲು, ಹೊಗಳುತ್ತಿದ್ದವರು ಪೆಚ್ಚಾಗುತ್ತಿದ್ದುದನ್ನು ನಾನು ಕಂಡಿದ್ದೆ. ಹಾಗಾಗಿ ರಾಧಾಕೃಷ್ಣ ಅವರು ದೂರವಾಣಿಯಲ್ಲಿ ಹೊಗಳುವುದಕ್ಕಿಂತ ಅವರ ಕಾದಂಬರಿಯನ್ನೇ ಕುರಿತು ಮೆಚ್ಚುಗೆ, ವಿಮರ್ಶೆ ವ್ಯಕ್ತಪಡಿಸಿದ್ದರ ಹಿನ್ನೆಯಲ್ಲಿ ಭೈರಪ್ಪನವರು ಒಪ್ಪಿ ಚಿತ್ರದುರ್ಗದವರೆಗೆ ಕೆಂಪು ಬಸ್ಸು ಹತ್ತಿಯೇ ಬಂದುಬಿಟ್ಟಿದ್ದರು.

ಸಾಹಿತ್ಯಪ್ರಿಯರಾಗಿದ್ದ ರಾಧಾಕೃಷ್ಣ ತಮ್ಮ ಆ ಬಗೆಯ ಒಲವಿನ ಕಾರಣದಿಂದಾಗಿ ಚಿತ್ರದುರ್ಗದ ಜಿಲ್ಲಾಧಿಕಾರಿ ಕಚೇರಿಯ ಬಲ ಪಕ್ಕಕ್ಕೆ ಒಂದು